ಕರ್ನಾಟಕ ಸರ್ಕಾರ

(ಪೊಲೀಸ್ ಇಲಾಖೆ)

NR 50
GR 170.

ಸಂಖ್ಯೆ:185/ಅಪರಾಧ/ಕೇಂ.ವ/2020.

ಆರಕ್ಷಕ ಮಹಾ ನಿರೀಕ್ಷಕರವರ ಕಛೇರಿ,
ಕೇಂದ್ರ ವಲಯ, ನಂ.5, ಮಿಲ್ಲರ್ಸ್ ರಸ್ತೆ,
ಬೆಂಗಳೂರು, ದಿನಾಂಕ.24/12/2020.

# ಜ್ಞಾಪನ

ವಿಷಯ:- ಸಜ್ಞೇಯ ಅಪರಾಧಗಳ ಬಗ್ಗೆ ದೂರು ನೀಡಿದಾಗ ಮತ್ತು ಸರಹದ್ದನ್ನು ಪರಿಗಣಿಸದೇ ಪ್ರಥಮ ವರ್ತಮಾನ ವರದಿಯನ್ನು ಕಡ್ಡಾಯವಾಗಿ ದಾಖಲಿಸುವ ಬಗ್ಗೆ (ಶೂನ್ಯ ಎಫ್.ಐ.ಆರ್)

ಉಲ್ಲೇಖ:-

1) ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು W.P. NO.30666/2019, dated. 19-09-2019.
2) ಪೊಲೀಸ್ ಪ್ರಧಾನ ಕಛೇರಿ ಸುತ್ತೋಲೆ ಸಂಖ್ಯೆ:ಸಿಆರ್‌ಎಂ-2/139/ WP/2019, ದಿನಾಂಕ:26-11-2019.
3) ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ, ಕಲ್ಬುರ್ಗಿ ಪೀಠ ರಿಟ್ ಪಿಟೀಷನ್ ನಂ. 200012/2020, ದಿನಾಂಕ: 17.12.2020.

-*-*-

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕಲ್ಬುರ್ಗಿ ಜಿಲ್ಲೆಯ ಮಿಣಜಗಿ ತಾಂಡದ ಮಹಿಳೆ ತಾರಾಬಾಯಿ ರವರು ಮಗ ಕಾಣೆಯಾಗಿರುವ ಬಗ್ಗೆ ಕಲ್ಬುರ್ಗಿ ಜಿಲ್ಲೆಯ ಸ್ಟೇಶನ್ ಬಜಾರ್ ಪೊಲೀಸ್ ಠಾಣೆಗೆ ದೂರು ನೀಡಿದ್ದರೂ ಠಾಣಾಧಿಕಾರಿಗಳು ಎಫ್.ಐ.ಆರ್ ದಾಖಲಿಸಿದೆ ಇದ್ದಾಗ, ಪಿರ್ಯಾದಿಯು ಮಾನ್ಯ ಉಚ್ಛ ನ್ಯಾಯಾಲಯ ಕಲ್ಬುರ್ಗಿ ಪೀಠದಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದು, ವಿಚಾರಣೆ ನಡೆಸಿದ ಮಾನ್ಯ ನ್ಯಾಯಮೂರ್ತಿ ಸುನೀಲ್‌ದತ್ ಯಾದವ್ ಹಾಗೂ ಶ್ರೀ ಕೃಷ್ಣಭಟ್ ರವರಿದ್ದ ಪೀಠ **ಠಾಣಾಧಿಕಾರಿಗೆ** ಒಂದು ವಾರ ಪೊಲೀಸ್ ಠಾಣೆಯ ಮುಂದಿನ ರಸ್ತೆಯ ಸ್ವಚ್ಛಗೊಳಿಸುವ ಶಿಕ್ಷೆಯನ್ನು ನೀಡಿ ಆದೇಶ ಹೊರಡಿಸಿರುತ್ತದೆ.

ಆದ್ದರಿಂದ ಕೇಂದ್ರವಲಯದ ಎಲ್ಲಾ ಪೊಲೀಸ್ ಠಾಣೆಯ ಠಾಣಾಧಿಕಾರಿಗಳಿಗೆ ತಿಳಿಸುವುದೇನೆಂದರೆ, ಸಜ್ಞೇಯ ಅಪರಾಧಗಳ ಬಗ್ಗೆ ಠಾಣೆಗೆ ಪಿರ್ಯಾದುದಾರರು ದೂರು ನೀಡಿದಾಗ (ಮೌಖಿಕವಾಗಿ ಅಥವಾ ಲಿಖಿತವಾಗಿ) ನಿಯಮಗಳ ಪ್ರಕಾರ ಕಡ್ಡಾಯವಾಗಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವುದು.

ಫಿರ್ಯಾದುದಾರರು ಪೊಲೀಸ್ ಠಾಣೆಗೆ ದೂರು ನೀಡಿದಾಗ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಇದು ನಮ್ಮ ಸರಹದ್ದಿಗೆ ಬರುವುದಿಲ್ಲವೆಂದು ಹೇಳಿ ಕಳುಹಿಸುವುದು ಸರಿಯಾದ ಕ್ರಮವಲ್ಲ. ಯಾವುದೇ ದೂರುಗಳು ಪೊಲೀಸ್ ಠಾಣೆಗೆ ಬಂದಲ್ಲಿ ಕೂಡಲೇ ದೂರನ್ನು ಪರಿಶೀಲಿಸಿ ಶೂನ್ಯ ಎಫ್.ಐ.ಆರ್ ದಾಖಲಿಸಿ, ಸಂಬಂಧಿಸಿದ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಿ, ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಮೇಲಿನ ನ್ಯಾಯಾಲಯದ ತೀರ್ಪುಗಳು ಮತ್ತು ಪ್ರಧಾನ ಕಛೇರಿಯ ಸುತ್ತೋಲೆಯಲ್ಲಿ ತಿಳಿಸಿರುವಂತೆ ಪೊಲೀಸ್ ಅಧೀಕ್ಷಕರುಗಳು ತಮ್ಮ ಜಿಲ್ಲೆಯ ಪೊಲೀಸ್ ಠಾಣೆಯ ಠಾಣಾಧಿಕಾರಿಗಳಿಗೆ ಮಾಸಿಕ ಅಪರಾಧ ಸಭೆಯಲ್ಲಿ ತಿಳುವಳಿಕೆ ನೀಡುವುದು ಮತ್ತು ಕಾರ್ಯಾಗಾರವನ್ನು ಏರ್ಪಡಿಸಿ, ಈ ಕಛೇರಿಗೆ ಪಾಲನಾ ವರದಿಯನ್ನು ಸಲ್ಲಿಸುವುದು.

ಕೇಂದ್ರ ವಲಯದ ಜಿಲ್ಲೆಯ ಪೊಲೀಸ್ ಠಾಣೆಗಳ ಎಲ್ಲಾ ಠಾಣಾಧಿಕಾರಿಗಳು ಮೇಲ್ಕಂಡ ನ್ಯಾಯಾಲಯದ ಮತ್ತು ಪ್ರಧಾನ ಕಛೇರಿಯ ಸುತ್ತೋಲೆಯ ಬಗ್ಗೆ ತಮ್ಮ ಸಿಬ್ಬಂದಿಯವರಿಗೆ ತಿಳಿಸುವುದು. ಎಫ್.ಐ.ಆರ್. ದಾಖಲಿಸದೇ ಕರ್ತವ್ಯ ಲೋಪವೆಸಗುವ ಠಾಣಾಧಿಕಾರಿ ಮತ್ತು ಸಿಬ್ಬಂದಿಯವರ ವಿರುದ್ಧ ಪೊಲೀಸ್ ಅಧೀಕ್ಷಕರುಗಳು ಶಿಸ್ತು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

24/11/2020

(ಸೀಮಾಂತ್ ಕುಮಾರ್ ಸಿಂಗ್ ಐಪಿಎಸ್)
ಆರಕ್ಷಕ ಮಹಾ ನಿರೀಕ್ಷಕರು,
ಕೇಂದ್ರ ವಲಯ ಬೆಂಗಳೂರು.

ಗೆ:- ಪೊಲೀಸ್ ಅಧೀಕ್ಷಕರು, ಬೆಂಗಳೂರು, ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಕೆಜಿಎಫ್.
ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ಬೆಂಗಳೂರು, ತುಮಕೂರು ಮತ್ತು ಕೋಲಾರ ಜಿಲ್ಲೆ.
ಕೇಂದ್ರ ವಲಯದ ಜಿಲ್ಲೆಗಳ ಎಲ್ಲಾ ಉಪ ವಿಭಾಗಗಳ ಪೊಲೀಸ್ ಉಪಾಧೀಕ್ಷಕರುಗಳಿಗೆ.
ಕೇಂದ್ರ ವಲಯದ ಜಿಲ್ಲೆಗಳ ಎಲ್ಲಾ ಪೊಲೀಸ್ ಠಾಣೆಗಳ ಠಾಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

TDR-1620HD8
24/11/2020

DSB

V. IOUT NR 367